**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ**

# C Mis. No.1306/2021

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕಲಾವತಿ | PW-01 |
| ತಂದೆಯ /ಗಂಡನ ಹೆಸರು | : | ಮಹದೇವಸ್ವಾಮಿ | |
| ವಯಸ್ಸು | : | 39 ವರ್ಷ | - |
| ಉದ್ಯೋಗ | : | ಕೂಲಿ ಕೆಲಸ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **22.12.2022.** |
| ವಾಸಸ್ಥಳ | : | ಬೊರೇದೇವರಮುಂಟಿ ಗ್ರಾಮ | - |

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಾದ ಶ್ರೀ ಟಿ.ಜಿ.ಎಸ್ ರವರಿಂದಃ**

ಎದುರುದಾರ ನನಗೆ ಗಂಡನಾಗಬೇಕು. ಎದುರುದಾರರ ಮತ್ತು ನನ್ನ ನಡುವೆ ವಿವಾಹ ಸುಮಾರು 25 ವರ್ಷಗಳ ಹಿಂದೆ ನನ್ನ ತವರೂರು ಬೊರೇದೇವರಮುಂಟಿ ಗ್ರಾಮದಲ್ಲಿ ನಮ್ಮ ಮನೆಯ ಮುಂದೆ ಆಗಿರುತ್ತದೆ. ಮದುವೆ ಕಾಲಕ್ಕೆ ನಮ್ಮ ತವರು ಮನೆಯಿಂದ ಎದುರುದಾರರಿಗೆ 20 ಗ್ರಾಂ ಚಿನ್ನ ಹಾಗೂ 30,000 ನಗದು ಹಣ ಹಾಗೂ ಬಟ್ಟೆ ನೀಡಿ ನನ್ನನ್ನು ಮದುವೆ ಮಾಡಿ ಕೊಟ್ಟಿರುತ್ತಾರೆ. ಮದುವೆಯಾದ ನಂತರ ನಾನು ಎದುರುದಾರರ ಮನೆಗೆ ಹೋಗಿ ಜೀವನ ನಡೆಸಿರುತ್ತೇನೆ. ಸುಮಾರು 18 ವರ್ಷಗಳ ಕಾಲ ಎದುರುದಾರರು ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದರು. ಇತ್ತೀಚೆಗೆ ಎದುರುದಾರರು ಮದ್ಯಪಾನ ಮಾಡಿ ಮನೆಗೆ ಬರುತ್ತಿದ್ದು ಅವರು ಮನೆಯ ಸಂಸಾರವನ್ನು ನಡೆಸುತ್ತಿಲ್ಲ. ನನ್ನ ಮತ್ತು ಎದುರುದಾರರ ವೈವಾಹಿಕ ಜೀವನದ ಫಲವಾಗಿ ಇಬ್ಬರು ಮಕ್ಕಳು ಜನಿಸಿದ್ದು ಅವರಲ್ಲಿ ಒಂದು ಹೆಣ್ಣು, ಒಂದು ಗಂಡು. ಮಗಳನ್ನು ಈಗ ವಿವಾಹ ಮಾಡಿದ್ದು ಮಗ ಓದುತ್ತಿದ್ದಾನೆ. ಎದುರುದಾರರು ಮನೆಗೆ ಕುಡಿದುಕೊಂಡು ಬಂದು ನಾನು ಕೂಲಿ ಮಾಡಿದ ಹಣವನ್ನು ತನಗೆ ಮದ್ಯಪಾನ ಮಾಡಲು ಕೊಡುವಂತೆ ಹಿಂಸೆ ನೀಡುತ್ತಿರುತ್ತಾನೆ. ನಾನು ಈಗ ಒಂದು ವರ್ಷದಿಂದಲೂ ನನ್ನ ತವರು ಮನೆಯಲ್ಲಿಯೇ ಇರುತ್ತೇನೆ. ಎದುರುದಾರರು ತೊಂದರೆ ಕೊಡುತ್ತಿದ್ದರಿಂದ ಗ್ರಾಮದಲ್ಲಿ ನ್ಯಾಯ ಪಂಚಾಯಿತಿ ಕೂಡ ಆಗಿರುತ್ತದೆ. ಎದುರುದಾರರು ತೊಂದರೆ ಕೊಡುತ್ತಿದ್ದರಿಂದ ಬೀಚನಹಳ್ಳಿ ಪೊಲೀಸ್ ಠಾಣೆಗೂ ನಾನು ಪಿರ್ಯಾದು ಕೊಟ್ಟಿದ್ದೆ. ನಾನು ನನ್ನ ಪಿರ್ಯಾದಲ್ಲಿ ಎದುರುದಾರರು ದೈಹಿಕ ಮತ್ತು ಮಾನಸಿಕವಾಗಿ ಹಿಂಸೆ ನೀಡಿ ವರದಕ್ಷಿಣೆ ತರುವಂತೆ ಪೀಡಿಸುತ್ತಿದ್ದರು ಎಂದು ಪಿರ್ಯಾದು ನೀಡಿದ್ದೆ. ನನಗೆ ನನ್ನ ತವರು ಮನೆಯಲ್ಲಿ 1 ಎಕರೆ ಆಸ್ತಿ ಇದ್ದು ಇಬ್ಬರು ಅಣ್ಣಂದಿರು ಒಬ್ಬ ತಮ್ಮ ಇರುತ್ತಾನೆ. ತವರು ಮನೆಯಲ್ಲಿ ನಾನು ಆಸ್ತಿ ತೆಗೆದುಕೊಂಡಿಲ್ಲ. ಎದುರುದಾರರಿಗೆ 3 ಎಕರೆ ಜಮೀನು ಮತ್ತು ಮಸಹಳ್ಳಿ ಗ್ರಾಮದಲ್ಲಿ 1 ಮನೆ 2 ಹೊಗೆ ಸೊಪ್ಪು ಬೆಯಿಸುವ ಬ್ಯಾರೆನ್ ಮತ್ತು ಒಂದು ಟ್ರ್ಯಾಕ್ಟರ್ ನಮ್ಮ ಮಾವನ ಹೆಸರಿನಲ್ಲಿರುತ್ತದೆ. ಎದುರುದಾರರಿಗೆ ವಾರ್ಷಿಕ 10,00,000/- ಆದಾಯ ಬರುತ್ತದೆ.

**ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಓ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**